**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

**ಸಿ.ಸಿ.ನಂ: 21/2022**

ಸಿ.ಡಬ್ಲ್ಯೂ –3 ಪಿ.ಡಬ್ಲ್ಯೂ -2

| | | |
|---|---|---|
| ಹೆಸರು | ಃ | ರಾಮಚಂದ್ರ |
| ತಂದೆಃಗಂಡ | ಃ | ದೇವಪ್ಪ |
| ವಯಸ್ಸು | ಃ | 62 ವರ್ಷ |
| ಉದ್ಯೋಗ | : | ಕೂಲಿ ಕೆಲಸ |
| ವಾಸಸ್ಥಳ | ಃ | ಬೆಟ್ಟಜೇವರ್ಗಿ |

ದಿನಾಂಕಃ18.10.2023

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದಃ**

ಆರೋಪಿ ಪರಿಚಯ ಇರುತ್ತದೆ. ಚಾಸಾ-1, 2, 4 ರಿಂದ 8 ರವರ ಪರಿಚಯ ಇರುತ್ತದೆ. ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಪೋಲಿಸರು ಸಹಿ ಮಾಡು ಎಂದ ಕಾರಣ ಸಹಿ ಮಾಡಿರುತ್ತೇನೆ. ಸಾಕ್ಷಿಗೆ ನಿಪಿ-1 ನ್ನು ತೋರಿಸಿ ಅದನ್ನು ಗುರುತಿಸಿರುವುದರಿಂದ ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)**

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

ದಿ 06.07.2021 ರಂದು ಬೆಳಗ್ಗೆ 9.00 ರಿಂದ 10.00 ರ ವರೆಗೆ ನನ್ನ ಸಮಕ್ಷಮ ಪಂಚನಾಮ ಮಾಡಿರುತ್ತಾರೆ ಎಂದರೆ ಸರಿ ಅಲ್ಲ.ನಾನು ಹಾಗೂ ಚಾಸಾ-2 ಪಂಚನಾಮೆಯನ್ನು ಓದಿ ತಿಳಿದು ಸಹಿ ಮಾಡಿರುತ್ತೆವೆ ಎಂದರೆ ಸಾಕ್ಷಿ ನಾನೋಬ್ಬನೇ ಸಹಿ ಮಾಡಿರುತ್ತೇನೆ ಎಂದು ಹೇಳುತ್ತಾರೆ. ಗುನ್ಹೆ ಸ್ಥಳ ವನ್ನು ಚಾಸಾ-1 ರವರು ತೋರಿಸಿರುತ್ತಾರೆ ಎಂದರೆ ಸರಿಯಲ್ಲ. ಪಂಚನಾಮೆಯ ಸಮಯದಲ್ಲಿ ಒಂದು ಕುಡಗೋಲು ಜಪ್ತಿಪಡಿಸಿರುತ್ತಾರೆ ಎಂದರೆ ಸರಿ ಅಲ್ಲ. ಪಂಚನಾಮೆಯನ್ನು ಓದಿ ತಿಳಿದು ಸಹಿ ಮಾಡಿದರು ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತೀದ್ದೇನೆ ಎಂದರೆ ಸರಿ ಅಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ**

ಪಾಟೀ ಸವಾಲು ಇರುವುದಿಲ್ಲ

**ಮರುವಿಚಾರಣೆಃ-** ಇರುವುದಿಲ್ಲ.

**ಓ.ಹೇ.ಕೇ.ಸರಿ ಇದೆ.**

ಅಪರ ಸಿವಿಲ್ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ.  ಆಳಂದ.